

ಆಗಮಿಸಿ ಪೂಜೆ ಸಲ್ಲಿಸಿ, ರಾಜನ ಆಜ್ಞೆಯನ್ನು ತಿಳಿಸಿ ಏಳು ದಿನಗಳ ಒಳಗಾಗಿ ಮರವನ್ನು ಕತ್ತರಿಸಿ ನೆಲಕ್ಕುರುಳಿಸುವ ವಿಷಯವನ್ನು ತಿಳಿಸಿ ತಮ್ಮನ್ನು ಮನ್ನಿಸುವಂತೆ ಪ್ರಾರ್ಥಿಸಿ ಹೊರಟರು. ಆ ದಿನ ರಾತ್ರಿ ಮಹಾರಾಜನ ಕನಸಿನಲ್ಲಿ ಹೊಳೆಯುವ ಹಸಿರು ಬಣ್ಣದ ಎಲೆಗಳು ಗೋಚರಿಸಿದವು. ಪಿಸುಗುಟ್ಟುವ ಧ್ವನಿಯಲ್ಲಿ 'ಓ ದಯಾಳು ಮಹಾರಾಜ, ಆಳುಗಳು ನಿನ್ನ ಉದ್ದೇಶವನ್ನು ತಿಳಿಸಿದ್ದಾರೆ, ದಯಮಾಡಿ ನಿನ್ನ ನಿರ್ಧಾರವನ್ನು ಬದಲಾಯಿಸಿಕೋ' ಎಂದಿತು. ಆಗ ರಾಜ 'ನನ್ನ ಮನಸ್ಸಿನಲ್ಲಿ ನಿರ್ಧರಿಸಿ ಆಗಿದೆ, ಬದಲಾವಣೆ ಸಾಧ್ಯವೇ ಇಲ್ಲ' ಎಂದು ಕನವರಿಸಿದ.

ಮರದ ದೇವತೆ 'ಮಹಾರಾಜ ಸ್ವಲ್ಪ ಯೋಚಿಸು ನೂರಾರು ವರ್ಷಗಳಿಂದ ಸುತ್ತಮುತ್ತಲ ಜನ ನನ್ನನ್ನು ಪೂಜಿಸುತ್ತ ಬಂದಿದ್ದಾರೆ. ಪ್ರಾಣಿ, ಪಕ್ಷಿ, ಕೀಟಗಳು ನನ್ನಲ್ಲಿ ಆಶ್ರಯ ಪಡೆದಿವೆ. ನನ್ನ ಬೇರುಗಳು ಭೂಮಿಯನ್ನು ಬಿಗಿಯಾಗಿ ಬಂಧಿಸಿವೆ, ಜನರು ನನ್ನ ನೆರಳಲ್ಲಿ ವಿಶ್ರಮಿಸುತ್ತಾರೆ, ಮಕ್ಕಳು ಆಟವಾಡುತ್ತಾರೆ, ಹೊಲಗಳಿಂದ ವಾಪಾಸಾಗುವ ಮಹಿಳೆಯರು ನನ್ನ ಪ್ರಶಾಂತವಾದ ಗಾಳಿ ಆಸ್ವಾದಿಸಿ ತೆರಳುತ್ತಾರೆ. ನನ್ನಿಂದ ಒಳ್ಳೆಯದಲ್ಲದೆ ಕೆಟ್ಟದೆಂದೂ ಆಗಿಲ್ಲ'.

ಮಹಾರಾಜ 'ಅದೆಲ್ಲ ನಿಜವಿರಬಹುದು ಆದರೆ ನನ್ನ ಉದ್ದೇಶ ಈಡೇರಿಕೆಗೆ ನೀನೇ ಸೂಕ್ತ, ಆದ್ದರಿಂದ ನಿನ್ನನ್ನು ಬಿಡಲಾರೆ' ಎಂದ.

ಮರದ ದೇವತೆ 'ಸರಿ ರಾಜ ಆಗಲಿ, ದಯಮಾಡಿ ನನ್ನ ಕೊನೆಯ ಆಸೆಯನ್ನು ನೆರವೇರಿಸುವೆಯಾ? ನನ್ನನ್ನು ಮೂರು ಭಾಗಗಳಾಗಿ ಕೊಲ್ಲು, ಮೊದಲು ಹಚ್ಚ ಹಸಿರಿನಿಂದ ತುಂಬಿರುವ ತಲೆಯ ಭಾಗವನ್ನು, ನಂತರ ನೂರಾರು ಕೈಗಳಿಂತಿರುವ ರೆಂಬೆ ಕೊಂಬೆಗಳನ್ನು. ಅಂತಿಮವಾಗಿ ನನ್ನ ಇಡೀ ದೇಹವನ್ನು ಹೊತ್ತ ಕಾಂಡವನ್ನು ಕತ್ತರಿಸಿಕೋ'.

ಮಹಾರಾಜ 'ಆಶ್ಚರ್ಯದಿಂದ ಇದು ತುಂಬಾ ಅಪರೂಪವಾದ ಕೋರಿಕೆ ಯಾರಾದರೂ ಮೂರು ಬಾರಿ ಸಾಯಲು ಇಚ್ಛಿಸುತ್ತಾರೆಯೇ, ಅದೇಕೆ ಹಾಗೇ' ಎಂದ.

ಮರದ ದೇವತೆ 'ಕಾರಣ ಇದೆ. ರಾಜ ನನ್ನ ಮಕ್ಕಳು ಇದೀಗ ತಾನೆ ಹೊರ ಪ್ರಪಂಚವನ್ನು ನೋಡುತ್ತಿವೆ. ನೀವು ಒಂದೇ ಬಾರಿಗೆ ನನ್ನನ್ನು ಕತ್ತರಿಸಿದರೆ, ನನ್ನ ಭಾರ ಅವುಗಳನ್ನು ಸಾಯುವಂತೆ ಮಾಡುತ್ತದೆ, ಅದೇ ಮೂರು ಭಾಗಗಳಾಗಿ ಕತ್ತರಿಸಿದರೆ. ಕೆಲವಾದರೂ ಬದುಕಿ ಉಳಿಯುತ್ತವಲ್ಲ ಎಂಬುದು ನನ್ನಾಸೆ ಎಂದು ರಾಜನ ಕನಸಿನಿಂದ ಅದೃಶ್ಯವಾಯಿತು'.

ಮಹಾರಾಜ ಮರುದಿನವೇ ತನ್ನ ಮಕ್ಕಳನ್ನು, ಮಂತ್ರಿಗಳನ್ನು, ಆಸ್ಥಾನಿಕರನ್ನು ಸಾಮ್ರಾಜ್ಯದ ನಿವಾಸಿಗಳನ್ನು ಕರೆದು ತನಗಾದ ಕನಸಿನ ವೃತ್ತಾಂತವನ್ನು ಹೇಳಿ, ತನ್ನ ನಿರ್ಧಾರವನ್ನು ಬದಲಾಯಿಸಿಕೊಂಡಿರುವುದಾಗಿ, ಅರಮನೆಯನ್ನು ಮರದ ಬದಲಿಗೆ ಕಲ್ಲಿನಿಂದ ಕಟ್ಟುವುದಾಗಿ ತಿಳಿಸಿದನು.

ಹಿಮವಂತ ರಾಜನ ಈ ನಿರ್ಧಾರದಿಂದ ಜನರು ತಮ್ಮ ಮನೆಗಳನ್ನು ಮರದಿಂದ ಕಟ್ಟುವುದನ್ನು ನಿಲ್ಲಿಸಿದರು. ದೇವರ ಮರಗಳು ಸ್ವತಂತ್ರವಾಗಿ ಬೆಳೆಯಲು ಸಾಮ್ರಾಜ್ಯದ ಜನರು ಅನುವು ಮಾಡಿಕೊಟ್ಟರು. ■

# ಗುಬ್ಬಚ್ಚಿ ಅಳಲು

■ ಸ. ಗಿರಿಜಾಶಂಕರ ಚಿಕ್ಕಮಗಳೂರು

ಗೂಡು ಕಟ್ಟಲು ಗುಬ್ಬಿಯೊಂದು
ಪಟ್ಟಣಕ್ಕೆ ಹಾರಿ ಬಂದು
ಸಂದುಗಳು ಕಾಣ ಸಿಗದೆ
ಹುಡುಕಿ ಹುಡುಕಿ ಸೋತಿತು

ಹಿಂದೆ ಇದ್ದ ಹೆಂಚಿನ ಮನೆ
ಎಲ್ಲಿ ಮಾಯವಾಯಿತು?
ತನಗೇ ಕೇಳಿಕೊಂಡಿತು
ಯೋಚಿಸುತ್ತಾ ನಿಂತಿತು

ಮೊಟ್ಟೆಗಳಿಗೆ ಕಾವು ಕೊಟ್ಟು
ಮರಿಗಳನ್ನು ಸಾಕಿದ
ದಿನವನೆನೆಸಿಕೊಂಡಿತು
ಮತ್ತೆ ಮತ್ತೆ ಹುಡುಕಿತು

ಹೆಂಚಿನ ಮನೆ ಕಾಣುತ್ತಿಲ್ಲ
ಹುಲ್ಲು ಹೊದಿಕೆ ಮೊದಲೇ ಇಲ್ಲ
ಮಾಡಿನ ಬದಲು ಗಾರೆ ಗಟ್ಟಿ
ನೋಡಿತದನು ಕೊಕ್ಕಲಿ ಕುಟ್ಟಿ

ಗೂಡಿಗಾಗಿ ಜಾಗ ಸಿಗದೆ
ಮೊಟ್ಟೆಯಿಡಲೂ ಆಗದೆ
ಅತ್ತ ಇತ್ತ ಹಾರಿತು
ಗೆಳೆಯನನ್ನು ಕರೆಯಿತು

ಬಾರೋ ಗೆಳೆಯ ಬಾ ಬಾ
ನಮ್ಮ ಗೂಡಿಗಿಲ್ಲ ಜಾಗ
ಹಳ್ಳಿಯತ್ತ ಹಾರುವ
ಮಾಡಿನ ಮನೆ ಹುಡುಕುವ

ಇರುವುದಲ್ಲಿ ಮಾಡ ಮನೆ
ಗೂಡು ಕಟ್ಟಿ ಬೆಚ್ಚನೆ
ಮೊಟ್ಟೆಯಿಟ್ಟು ಥಟ್ಟನೆ
ಮರಿಗಳನ್ನು ಬೆಳೆಸುವ

ಲಾಲಿಯನ್ನು ಹಾಡುವಾ
ಹಣ್ಣುಕೀಟ ತಿನಿಸುವಾ
ಹಾರುವುದ ಕಲಿಸುವಾ
ಸಂತಸದಿ ಬದುಕುವಾ ■



ಚಿತ್ರ: ಚಿದ್ರ್ ಹಳೇಮನಿ